## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮಂಡಳಿ ಸಭೆಯ ನಡವಳಿಗಳು

ವಿಷಯ: ಕೋಲಾರ ಹಾಗೂ ರಾಯಚೂರು ನಗರಗಳಲ್ಲಿನ ಕವಿಪ್ರನಿನಿ 220ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಕವಿಮಂ ಇಂಜಿನಿಯರುಗಳ ಸಂಘದ ಪ್ರಾದೇಶಿಕ ಕೇಂದ್ರದ ಬಹು ಉಪಯೋಗಿ ಕಟ್ಟಡಗಳನ್ನು ನಿರ್ಮಿಸಲು ಖಾಲಿ ಇರುವ ನಿವೇಶನವನ್ನು ಲೀಸ್ ಆಧಾರದ ಮೇಲೆ ನೀಡಲು ಕೋರಿರುವ ಬಗ್ಗೆ.

ಓದಿದೆ:

1. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು, ರವರ ಪತ್ರ ಸಂಖ್ಯೆ: KEBEA/GS/2020-21/125 ದಿನಾಂಕ:04.12.2020.
2. ನಿಗಮ ಕಛೇರಿಯ ಪತ್ರ ಸಂಖ್ಯೆ: B7/9966/20-21 ದಿನಾಂಕ: 20.01.2021.
3. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಬೆಂಗಳೂರು, ರವರ ಪತ್ರ ಸಂಖ್ಯೆ: 2021-22/3508-10 ದಿನಾಂಕ:16.06.2021.
4. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕಲಬುರಗಿ, ರವರ ಪತ್ರ ಸಂಖ್ಯೆ: 2017-18/2794-97 ದಿನಾಂಕ:12.06.2017.
5. ನಿಗಮ ಕಛೇರಿಯ ಪತ್ರ ಸಂಖ್ಯೆ: SA8/B7/68072/2017-18 ದಿನಾಂಕ: 27.06.2017.
6. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕಲಬುರಗಿ, ರವರ ಪತ್ರ ಸಂಖ್ಯೆ: 2021-22/2484-87 ದಿನಾಂಕ:08.06.2021.
7. ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು, ರವರ ಪತ್ರ ಸಂಖ್ಯೆ: KEBEA/Pr/2020-21/82-83 ದಿನಾಂಕ:05.07.2021.
8. ದಿನಾಂಕ:18.11.2021 ರಂದು ನಡೆದ 126 ನೇ ನಿಗಮದ ಮಂಡಳಿ ಸಭೆಯ ಠರಾವು ಸಂಖ್ಯೆ:126/20.

**ಪ್ರಸ್ತಾವನೆ:**

1. ಕವಿಮಂ ಇಂಜಿನಿಯರುಗಳ ಸಂಘವು ಕೋಲಾರ ಹಾಗೂ ರಾಯಚೂರು 220 ಕೆ.ವಿ ಉಪಕೇಂದ್ರಗಳ ಆವರಣದಲ್ಲಿನ, ಕವಿಪ್ರನಿನಿಯ, ಅನುಕ್ರಮವಾಗಿ, 25 X 50 ಮೀಟರ್ ಹಾಗೂ 30.50 X 30.50 ಮೀಟರ್ ಅಳತೆಯ ಜಾಗಗಳನ್ನು ಸಂಘದ ಬಹು ಉಪಯೋಗಿ ಕಟ್ಟಡಗಳನ್ನು ನಿರ್ಮಿಸಲು ಗುತ್ತಿಗೆ ಆಧಾರದ ಮೇಲೆ ನೀಡುವಂತೆ ಕೋರಿಕೆ ಸಲ್ಲಿಸಿದ್ದರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು ಹಾಗೂ ಕಲಬುರಗಿ ರವರು ಕೋಲಾರ ಹಾಗೂ ರಾಯಚೂರು 220 ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಕವಿಮಂ ಇಂಜಿನಿಯರುಗಳ ಸಂಘ ಕೋರಿರುವ ಜಾಗಗಳು, ಕವಿಪ್ರನಿನಿಯ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಸದರಿ ಜಾಗಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದೆಂದು ವರದಿ ನೀಡಿರುತ್ತಾರೆ.
3. ಮುಖ್ಯ ಇಂಜಿನಿಯರ್ (ವಿ) (ಯೋ ಮತ್ತು ಸ) ರವರು ಸಹ ಸದರಿ ಉಪಕೇಂದ್ರಗಳ ಆವರಣದಲ್ಲಿ ಕವಿಮಂ ಇಂಜಿನಿಯರುಗಳ ಸಂಘ ಕೋರಿರುವ ಜಾಗಗಳು ಉಪಕೇಂದ್ರಗಳ ವಿಸ್ತರಣೆ ಹಾಗೂ ಉನ್ನತೀಕರಣಕ್ಕೆ ಅಡಚಣೆಯುಂಟಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.
4. ಈ ಹಿನ್ನೆಲೆಯಲ್ಲಿ, ಕೋಲಾರ ಮತ್ತು ರಾಯಚೂರು 220ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿ ಕವಿಮಂ ಇಂಜಿನಿಯರುಗಳ ಸಂಘದ ಪ್ರಾದೇಶಿಕ ಬಹುಉಪಯೋಗಿ ಕಟ್ಟಡಗಳನ್ನು ನಿರ್ಮಿಸಲು 1000 ಚದುರ ಮೀಟರ್ ಅಳತೆಗೆ ಮೀರದಂತೆ ಖಾಲಿ ಜಾಗಗಳನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ, ಪ್ರತಿ ಜಾಗಕ್ಕೆ ಸಾಂಕೇತಿಕ ವಾರ್ಷಿಕ ಗುತ್ತಿಗೆ ಮೊತ್ತ ರೂ.1000/-ಗಳಂತೆ, ನೀಡುವ ಪ್ರಸ್ತಾವನೆಯನ್ನು, ದಿನಾಂಕ 18/11/2021 ರಂದು ನಡೆದ 126 ನೇ ಮಂಡಳಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿತ್ತು.
5. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ:

   *"RESOLVED THAT approval be and is hereby accorded to spare identified vacant lands not exceeding 1000 Sq. Mtrs each in the premises of 220kV station at Kolar and Raichur city on lease basis for a period of 30 years on nominal annual lease amount or Rs.1000/- for each place, for construction of their Regional Multipurpose buildings.*

   *FURTHER RESOLVED THAT Director(Admin & HR), KPTCL be and is hereby authorised to take further needful action, accordingly".*

6. ಮಂಡಳಿ ಸಭೆಯ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ: ಕವಿಪ್ರನಿನಿ/ಬಿ7/9966/20-21 ಬೆಂಗಳೂರು ದಿನಾಂಕ: 22 FEB 2022

ಕೋಲಾರ ಹಾಗೂ ರಾಯಚೂರು ನಗರಗಳಲ್ಲಿನ ಕವಿಪ್ರನಿನಿ 220 ಕೆ.ವಿ ಉಪಕೇಂದ್ರಗಳ ಆವರಣದಲ್ಲಿನ ಕವಿಪ್ರನಿನಿಗೆ ಸೇರಿದ, ಗುರುತಿಸಲಾಗಿರುವ ಖಾಲಿ ಜಾಗಗಳನ್ನು, ಈ ಉಪಕೇಂದ್ರಗಳ ಆವರಣದಲ್ಲಿ 1000 ಚದುರ ಮೀಟರ್ ವಿಸ್ತೀರ್ಣಕ್ಕೆ ಮೀರದಂತೆ, ಪ್ರಾದೇಶಿಕ ಬಹುಉಪಯೋಗಿ ಕಟ್ಟಡಗಳನ್ನು ನಿರ್ಮಿಸಲು, 30(ಮೂವತ್ತು) ವರ್ಷಗಳ ಅವಧಿಗೆ, ಗುತ್ತಿಗೆ ಆಧಾರದ ಮೇಲೆ, ಪ್ರತಿ ಜಾಗಕ್ಕೆ ವಾರ್ಷಿಕ ಸಾಂಕೇತಿಕ ಗುತ್ತಿಗೆ ಮೊತ್ತ ರೂ.1000/-

(ರೂ.ಒಂದು ಸಾವಿರ ರೂ.ಗಳು ಮತ್ರ) ರಂತೆ, ಕವಿಮಂ ಇಂಜಿನಿಯರುಗಳ ಸಂಘಕ್ಕೆ ನೀಡಲು ನಿಗಮದ ಅನುಮೋದನೆ ನೀಡಿದೆ.

ಸದರಿ ಅನುಮೋದನೆಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:

1. ಕೋಲಾರ ಹಾಗೂ ರಾಯಚೂರು 220ಕೆ.ವಿ ಉಪಕೇಂದ್ರಗಳ ಆವರಣದಲ್ಲಿ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು ಹಾಗೂ ಕಲಬುರಗಿ ರವರ ಪ್ರಸ್ತಾವನೆಯಲ್ಲಿನ ನಕಾಶೆಯಲ್ಲಿ ಗುರುತಿಸಿರುವಂತೆ, 1000 ಚದುರ ಮೀಟರ್ ವಿಸ್ತೀರ್ಣಕ್ಕೆ ಮೀರದಂತೆ ನಿವೇಶನ ಗುರುತಿಸುವುದು.
2. ಕವಿಪ್ರನಿನಿಯ ಸಂಬಂಧಪಟ್ಟ ಟಿಎಲ್ ಮತ್ತು ಎಸ್ ಎಸ್ ವಿಭಾಗ, ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರುಗಳು ಕವಿಮಂ ಇಂಜಿನಿಯರುಗಳ ಸಂಘದ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
3. ಸದರಿ ಜಾಗಗಳನ್ನು ಕವಿಮಂ ಇಂಜಿನಿಯರುಗಳ ಸಂಘಕ್ಕೆ ಸಾಂಕೇತಿಕ ವಾರ್ಷಿಕ ಲೀಸ್ ಮೊತ್ತ ರೂ.1000/–ಗಳಂತೆ ನಿಗದಿಪಡಿಸುವುದು.
4. ಕವಿಮಂ ಇಂಜಿನಿಯರುಗಳ ಸಂಘಕ್ಕೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದು.
5. ಉದ್ದೇಶಿತ ಕಟ್ಟಡಗಳ ನಿರ್ಮಾಣವು ಗರಿಷ್ಠ 3 ವರ್ಷಗಳ ಅವಧಿಯಲ್ಲಿ ನಿರ್ಮಿಸಲಾಗದಿದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದು.
6. ನಿಗಮವು ಗುತ್ತಿಗೆ ನೀಡಲು ಅನುಮೋದಿಸಿರುವ ಜಾಗಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವುದು.
7. ಗುತ್ತಿಗೆ ಆಧಾರದ ಮೇಲೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಟಿಎಲ್ ಮತ್ತು ಎಸ್ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

ಆದೇಶದ ಮೇರೆಗೆ,

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿ:–ಮಾಹಿತಿಗಾಗಿ:**

1. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ಕಲಬುರಗಿ.
2. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ: www.kptcl.karnataka.gov.in ನಲ್ಲಿ ಪ್ರಕಟಿಸಲಾಗಿದೆ.**

1. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿ) ವೃತ್ತ, ಬಿಆರ್ಎಜಡ್, ಕವಿಪ್ರನಿನಿ, ಬೆಂಗಳೂರು.
2. ಅಧೀಕ್ಷಕ ಇಂಜಿನಿಯರ್ (ವಿ), (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮುನಿರಾಬಾದ್.
3. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ಕಲಬುರಗಿ.
6. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕವಿಪ್ರನಿನಿ, ಕೋಲಾರ/ ರಾಯಚೂರು.
7. ಕಾರ್ಯನಿರ್ವಾಹಕ ಇಂಜಿನಿಯರ್(ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ಕಲಬುರಗಿ.
8. ಉಪ–ಲೆಕ್ಕ ನಿಯಂತ್ರಣಾಧಿಕಾರಿ(ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ಕಲಬುರಗಿ.
9. ಲೆಕ್ಕಾಧಿಕಾರಿ(ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:**

1. ಶ್ರೀ. ಟಿ.ಆರ್. ರಾಮಕೃಷ್ಣಯ್ಯ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ. ಟಿ.ಎಂ. ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ. ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಸ್ಥೆ, ಬೆಂಗಳೂರು.